**Com.O.S**. 156/2023

**PW**-1

**ಸಾಕ್ಷಿಯನ್ನು ದಿನಾಂಕ 30.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಂ.ಸಿ.ಆರ್ ವಕೀಲರಿಂದಃ**

ನಾನು ವಾದಿ ಸಂಸ್ಥೆಯಲ್ಲಿ ಎಷ್ಟು ವರ್ಷದಿಂದ ಕೆಲಸ ಮಾಡುತ್ತಿದ್ದೇನೆ ಎಂದು ಪ್ರಮಾಣಪತ್ರ ಹಾಗೂ ಜಿ.ಪಿ.ಎ ನಲ್ಲಿ ನಮೂದಿಲ್ಲ ಎಂದರೆ ನಿಜ. ಪ್ರತಿವಾದಿ ಸಂಸ್ಥೆಯವರು ನೀಡಿದ್ದ ಪರ್ಚೆಸ್ ಆರ್ಡರನ್ನು ಹಾಜರುಪಡಿಸಿರುವ ಬಗ್ಗೆ ನೋಡಿ ಹೇಳಬೇಕು. ನಾನು ಆ ಪರ್ಚೆಸ್ ಆರ್ಡರನ್ನು ಪರಿಶೀಲನೆ ಮಾಡಿರುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆ ಪರ್ಚೆಸ್ ಆರ್ಡರ್ ಪ್ರತಿ ಎಂದರೆ ನಿಜ. ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿದ್ದರಿಂದ ಅದನ್ನು ನಿಡಿ1 ಎಂದು ಗುರುತಿಸಿದೆ. ಆ ಪರ್ಚೆಸ್ ಆರ್ಡರಿಗೆ ಸಂಬಂಧಪಟ್ಟಂತೆ ಪ್ರತಿವಾದಿ 3 ಲಕ್ಷವನ್ನು ಮುಂಗಡ ಪಾವತಿಸಿದ್ದರು ಎಂದರೆ ನಿಜ. ನಿಪಿ3 ರಲ್ಲಿ ನನ್ನ ಇ-ಮೇಲ್ ಐಡಿ ಇಲ್ಲ. ನಿಪಿ3 ನ್ನು ವಾದಿ ಸಂಸ್ಥೆಯ ಪ್ರಿಂಟರಿನಿಂದ ಪ್ರಿಂಟ್ ಮಾಡಲಾಗಿದೆ. ನಿಪಿ3 ನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿ ಸಂಸ್ಥೆಯ ವ್ಯವಹಾರಗಳು ಎಸೆನ್ಸಿಯಲ್ ಸರ್ವಿಸ್ ಅಡಿ ಬರುತ್ತವೆ ಎಂದರೆ ನಿಜ. ಪ್ರತಿವಾದಿ ಸಂಸ್ಥೆಯವರು ಮೈದಾಹಿಟ್ಟು, ಗೋದಿಹಿಟ್ಟು ಮುಂತಾದ ಆಹಾರ ಪದಾರ್ಥಗಳನ್ನು ತಯಾರಿಸುತ್ತಾರೆ.

ಪ್ರತಿವಾದಿ ಸಂಸ್ಥೆಯವರು ತಯಾರಿಸುವ ಆಹಾರ ಪದಾರ್ಥಗಳನ್ನು ಪ್ಯಾಕ್ ಮಾಡಲು ನಮ್ಮಿಂದ ರೋಲ್ ಹಾಗೂ ಪೌಚುಗಳನ್ನು ಖರೀದಿ ಮಾಡುತ್ತಾರೆ. ಆ ಪೌಚುಗಳಿಲ್ಲದೇ ಪ್ರತಿವಾದಿಗೆ ಆಹಾರ ಪದಾರ್ಥಗಳನ್ನು ಮಾರಾಟ ಮಾಡಲಾಗುವುದಿಲ್ಲ ಎಂದರೆ ನಿಜ. ಪ್ರತಿವಾದಿಗಳು ಕೊಟ್ಟ ಆದೇಶದಂತೆ ಮೆಟಿರಿಯಲ್ ತಯಾರಿದ್ದ ಬಗ್ಗೆ ಪ್ರತಿವಾದಿ ಸಂಸ್ಥೆಗೆ ಪೋನ್ ಮೂಲಕ ತಿಳಿಸಿದ್ದರಿಂದ ಆ ಬಗ್ಗೆ ದಾಖಲೆ ಇರುವುದಿಲ್ಲ. ನಿಗದಿತ ಅವಧಿಯೊಳಗೆ ಪ್ರತಿವಾದಿ ಸಂಸ್ಥೆಯ ಅವಶ್ಯಕತೆ ತಕ್ಕಂತೆ ಮೆಟಿರಿಯಲ್ ತಯಾರಿಸಿಲ್ಲ ಮತ್ತು ತಯಾರಿಸಿದ ಬಗ್ಗೆ ಅವರಿಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ಪರ್ಚೆಸ್ ಆರ್ಡರ್ ನೀಡಿದ 1 ವಾರದಲ್ಲಿ ಮೆಟಿರಿಯಲ್ ತಯಾರಿಸಿಕೊಡುವಂತೆ ಪ್ರತಿವಾದಿ ಸಂಸ್ಥೆಯವರು ನಮ್ಮ ಸಂಸ್ಥೆಗೆ ವಿನಂತಿ ಮಾಡಿದ್ದರು ಎಂದರೆ ಸರಿಯಲ್ಲ. ನಾವು ಅದನ್ನು ಒಪ್ಪಿ ಪರ್ಚೆಸ್ ಆರ್ಡರ್ ಪಡೆದಿರುತ್ತೇವೆ ಎಂದರೆ ಸರಿಯಲ್ಲ. 2020 ರ ಮಾರ್ಚನಿಂದ ಜೂನ್‌ವರೆಗೆ ಕೊರೋನ ರೋಗ ಹರಡಿತ್ತು ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಆಹಾರ ವಸ್ತುಗಳ ಸರಬರಾಜಿಗೆ ಮೆಟಿರಿಯಲ್ ತಯಾರಿಸುವ ಕಾರಣಕ್ಕೆ ನಮ್ಮ ಸಂಸ್ಥೆ ಆ ಕಾಲದಲ್ಲೂ ಕಾರ್ಯ ನಿರ್ವಹಿಸುತ್ತಿತ್ತು. ಆ ಅವಧಿಯಲ್ಲಿ ಪ್ರತಿವಾದಿ ಸಂಸ್ಥೆ ಸಹ ಕಾರ್ಯ ನಿರ್ವಹಿಸುತ್ತಿತ್ತು ಎಂದರೆ ಗೊತ್ತಿಲ್ಲ. ಆ ಅವಧಿಯಲ್ಲಿ ನಮ್ಮ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದ್ದರೂ ನಿಗದಿತ ಅವಧಿಯೊಳಗೆ ಪ್ರತಿವಾದಿ ಸಂಸ್ಥೆಯ ಮೆಟಿರಿಯಲ್ಲನ್ನು ತಯಾರಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾವು ಮೆಟಿರಿಯಲ್ ಸರಬರಾಜು ಮಾಡದಿದ್ದ ಕಾರಣಕ್ಕೆ ಪ್ರತಿವಾದಿ ಸಂಸ್ಥಯವರು ತಮಗೆ

ಬಂದಿದ್ದ ಆರ್ಡರುಗಳು ಕ್ಯಾನ್ಸಲ್ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಕಾರಣಕ್ಕೆ ನಮ್ಮ ಸಂಸ್ಥೆಯೇ ಪ್ರತಿವಾದಿ ಸಂಸ್ಥೆಗೆ ಪರಿಹಾರ ನೀಡಬೇಕು ಎಂದರೆ ಸರಿಯಲ್ಲ. ಡಿ.ಎಲ್.ಎಸ್.ಎ ದಲ್ಲಿ ಪ್ರಕರಣ ಏನಾಗಿದೆ ಎಂದು ದಾಖಲೆ ಸಲ್ಲಿಸಿರುವ ಬಗ್ಗೆ ನಮ್ಮ ವಕೀಲರಿಗೆ ಗೊತ್ತು. ಡಿ.ಎಲ್.ಎಸ್.ಎ ಪ್ರಕರಣದಲ್ಲಿ ನಾವು 3 ಲಕ್ಷ ಹಣವನ್ನು ಪ್ರತಿವಾದಿಗೆ ನೀಡುವುದಾಗಿ ಒಪ್ಪಿದ್ದೆವು ಎಂದರೆ ಸರಿಯಲ್ಲ. ಪ್ರತಿವಾದಿ ಸಂಸ್ಥೆಯವರು ಆ 3 ಲಕ್ಷವನ್ನು ವಾಪಸ್ ಕೇಳಬಾರದೆಂದು ಈ ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಾವು ಪ್ರತಿವಾದಿ ಸಂಸ್ಥೆಗೆ 3 ಲಕ್ಷವನ್ನು ಬಡ್ಡಿ ಸಮೇತ ವಾಪಸ್ ನೀಡಲು ಜವಬ್ದಾರರಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ ಸಂಸ್ಥೆಯ ಆರ್ಡರ್ ಕ್ಯಾನ್ಸಲ್ ಆಗಿದ್ದಕ್ಕೆ 5 ಲಕ್ಷ ಪರಿಹಾರ ನೀಡಲು ನಮ್ಮ ಸಂಸ್ಥೆ ಜವಬ್ದಾರಿ ಹೊಂದಿದೆ ಎಂದರೆ ಸರಿಯಲ್ಲ. ಪ್ರತಿವಾದಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ4 ನೋಟಿಸನ್ನು ಸಹ ಈ ದಾವೆಗೋಸ್ಕರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು

ಮೈಸೂರು